ಅಸಲು ದಾವಾ ಸಂಖ್ಯೆ - 118/2010
ಪಿಡಬ್ಲ್ಯೂ - 01
ದಿನಾಂಕಃ 07-08-2024
ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮಧ್ಯಂತರ ಅರ್ಜಿ 42 ಮತ್ತು 43 ರಲ್ಲಿ ಆದ ಆದೇಶದ ಮೇರೆಗೆ ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 3 ರಿಂದ 7 ರವರ ಪರ ಮಾನ್ಯ ಸರಕಾರಿ ವಕೀಲರಿಂದಃ**

ನವಾಜಖಾತುರವರ ಮರಣದ ನಂತರ ಪ್ರತಿವಾದಿ ಸಂಖ್ಯೆ 1 ರವರು ನವಾಜಖಾತು ರವರು ವಾರಸುದಾರರು ಎಂದು ಇದೇ ನ್ಯಾಯಾಲಯದಲ್ಲಿ ಅಸಲು ದಾವೆ ನಂಬರ 171/1984 ರನ್ನು ಹೂಡಿರುತ್ತೀರಾ, ನ್ಯಾಯಾಲಯವು ದಿಃ31-10-1994 ರಂದು 1 ನೇ ಪ್ರತಿವಾದಿರವರೆ ವಾರಸುದಾರರು ಎಂದು ನಿರ್ದೇಶಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಸಲು ದಾವೆ ನಂಬರ 171/1984 ಅನ್ನು ಹಾವೇರಿ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ ಆರ್.ಎ ನಂಬರ 16/1996 ರಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆರ್.ಎ ನಂಬರ 16/1996 ರಲ್ಲಿ ಸವಣೂರು ನ್ಯಾಯಾಲಯವು ಹೊರಡಿಸಿದ ಆದೇಶವು ಖಾಯಂ ಆಗಿ ಇರುತ್ತದೆ ಎಂದರೆ ಸರಿಯಲ್ಲ. ನಂತರ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಹೂಡಿದ ಮೇಲ್ಮನವಿಗಳಾದ ಆರ್.ಎಸ್.ಎ ನಂಬರ 130/1999 ಮತ್ತು ಸಿ.ಡಬ್ಲ್ಯೂ.ಆರ್.ಎಸ್.ಎ ದಿಃ28-02-2000 ರಂದು ವಜಾಗೊಂಡಿರುತ್ತದೆ ಎಂದರೆ ಸರಿಯಲ್ಲ.

ಈ ಎಲ್ಲಾ ದಾವೆಗಳು ಮತ್ತು ಆದೇಶಗಳು ವಜಾ ಆಗಿದ್ದು, ನಿಮಗೆ ತಿಳಿದಿದ್ದರೂ ಸಹ, ನಿಮಗೆ ಆ ವೇಳೆಯಲ್ಲಿ ದಾವೆಯನ್ನು ದಾಖಲಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸದರಿ ದಾವೆಗಳು ಮತ್ತು ಆದೇಶಗಳು ವಜಾ ಆದ ಬಗ್ಗೆ ನನಗೆ ಯಾವುದೇ ಮಾಹಿತಿ ಇರಲಿಲ್ಲ. ಗೆಜೆಟ್ ನೋಟಿಫಿಕೇಶನ್ ದಿಃ18-05-2006 ರಂದು ಮಾನ್ಯ ಜಿಲ್ಲಾ ಅಧಿಕಾರಿಗಳು, ಧಾರವಾಡ ಇವರು ಸರಕಾರದ ಆದೇಶದದಂತೆ ಪ್ರತಿವಾದಿಯರಿಗೆ ಸರಳ ವಾರಸುದಾರ ಇದ್ದಿದ್ದರಿಂದ ನವಾಜಖಾತು ಇವರ ಹೆಸರಿಗೆ ಇದ್ದ ಆಸ್ತಿಗಳನ್ನು ಹಸ್ತಾಂತರಿಸಲು ಆದೇಶ ಮಾಡಿದ ಕಾರಣ ಮೃತರ ಹೆಸರಿಗೆ ಇದ್ದ ಆಸ್ತಿಗಳನ್ನು ಪ್ರತಿವಾದಿಯರಿಗೆ ಪಡೆಯಲು ಪೂರ್ಣ ಹಕ್ಕು ಇದ್ದಿದ್ದರಿಂದ ಇದನ್ನು ತಡೆ ಹಿಡಿಯಬೇಕೆಂದು ಮಾಡಿದನ್ನು ಪ್ರತಿವಾದಿಯರು ತಿರಸ್ಕರಿಸಿರುತ್ತಾರೆ ಎಂದರೆ ಸರಿಯಲ್ಲ.

ಈ ದಾವೆಯನ್ನು ದಾಖಲಿಸುವ ಪೂರ್ವದಲ್ಲಿ ಕೋರ್ಟ್ಸ್ ಆಫ್ ವಾರಡ್ಸ್ ಕಾಯ್ದೆಯ ಪ್ರಕಾರ ನೀವು ಯಾವುದೇ ನೋಟೀಸನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನೀವು ಸಲ್ಲಿಸಿರುವ ಸಾಕ್ಷಿ ಪ್ರಮಾಣ ಪತ್ರವು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ನೀವು ಸಲ್ಲಿಸಿರುವ ದಾಖಲೆಗಳಲ್ಲವು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ದಾವೆ ಆಸ್ತಿಗಳಿಗೆ ನಿಮಗೆ ಸಂಬಂಧ ಇಲ್ಲದೇ ಇದ್ದರೂ ಸಹ ಸರಕಾರಕ್ಕೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಹೂಡಿದ್ದೀರಿ ಎಂದರೆ ಸರಿಯಲ್ಲ. ದಾವೆಯಲ್ಲಿ ನೀವು ಕೇಳಿರುವ ಮಾಗಣಿಯನ್ನು ಪಡೆಯಲು ನೀವು ಅರ್ಹರು ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು